ಸಿಸಿ.168/2018

ಪಿ.ಡಬ್ಲ್ಯೂ- **1**

<u>ದಿನಾಂಕಃ **24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಹೆಚ್ ಸಿ ಎಸ್ **ವಕೀಲರಿಂದ**</u>

ದಿನಾಂಕಃ 14-10-2017 ರಂದು ಅಪಘಾತ ಸಂಭವಿಸಿರುತ್ತದೆ. ಸ್ವಿಫ್ಟ್ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ಎದುರುಗಡೆಯಿಂದ ಬಂದ ವಾಹನದ ಸಂಖ್ಯೆ ಹಾಗೂ ಯಾವ ಕಂಪನಿಯದ್ದು ಎಂದು ನನಗೆ ನೆನಪಿಲ್ಲ. ಎದುರುಗಡೆಯಿಂದ ಬಂದ ದ್ವಿಚಕ್ರ ವಾಹನವನ್ನು ಓಡಿಸುತ್ತಿದ್ದ ವಾಹನದ ಚಾಲಕ ಹಾಗೂ ಹಿಂಬದಿ ಸವಾರನ ಹೆಸರು ನನಗೆ ಈಗ ನೆನಪಿಲ್ಲ. ಅಪಘಾತವಾದ ನಂತರ ದ್ವಿಚಕ್ರ ವಾಹನದ ಚಾಲಕ ಬೆನ್ನು ಮೂಳೆ ಮುರಿತದಿಂದ ಚಿಕಿತ್ಸೆಫಲಕಾರಿಯಾಗದೆ ತೀರಿ ಹೋಗಿರುತ್ತಾನೆಂದರೆ ಸಾಕ್ಷಿ ಅಪಘಾತದಿಂದ ತೀರಿ ಹೋಗಿರುವುದಿಲ್ಲ, ಬೇರೆ ಕಾರಣದಿಂದ ತೀರಿ ಹೋಗಿರುತ್ತಾನೆಂದು ನುಡಿದಿರುತ್ತಾರೆ. ನಾನು ಬರಬೇಕಾದರೆ ವಾಹನ ನಿಧಾನವಾಗಿ ಚಲಿಸುತಿತ್ತು. ಅಪಘಾತವಾದ ನಂತರ ಸಂತವೇರಿ ಊರಿನ 4-5 ಜನರು ಏಕಾಏಕಿ ಬಂದು ನನಗೆ ಹೊಡೆದಿರುತ್ತಾರೆ. ಅವರ ಹೆಸರು, ವಿಳಾಸ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯ ಹೆಸರು ನನಗೆ ತಿಳಿದಿರುವುದಿಲ್ಲ. ದೂರನ್ನು ನೀಡುವಾಗ ನನಗೆ ಹೊಡೆದ ವ್ಯಕ್ತಿ ಯಾರು ಎಂದು ನನಗೆ ತಿಳಿದಿರುವುದಿಲ್ಲ, ಆರೋಪಿಯೇ ಆ ವ್ಯಕ್ತಿ ಎಂದು ನನಗೆ ಮಹಜರ್ ಮಾಡಿದ ನಂತರ ಊರಿನವರು ತಿಳಿಸಿದ ಮೇರೆಗೆ ತಿಳಿದುಬಂದಿರುತ್ತದೆ. ನಿಮಗೆ ಹಲ್ಲೆ ಮಾಡಿದ ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡಿದ ವ್ಯಕ್ತಿಗಳು ಯಾರು ಎಂದು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅಪಘಾತವಾದ ದಿನದಂದೇ ದೂರನ್ನು ನೀಡಿರುತ್ತೇನೆ. ಗುಂಪಿನಲ್ಲಿ ಯಾರ್ಯಾರು ನನಗೆ ಎಲ್ಲೆಲ್ಲಿ ಹೊಡೆದರು ಎಂದು ನನಗೆ ಈಗ ನೆನಪಿಲ್ಲ. ಕೈಗಳಿಂದ ಹೊಡೆದು ದೊಡ್ಡದಾದ ಕಲ್ಲಿನಿಂದ ನನಗೆ ಹೊಡೆಯಲು ಬಂದಾಗ ನನ್ನ ತಾಯಿ ಅವರನ್ನು ದಬ್ಬಿರುತ್ತಾರೆ. ಪೊಲೀಸರಿಗೆ ಮಹಜರ್ ಸಮಯದಲ್ಲಿ ಕಲ್ಲನ್ನು ಯಾರೂ

ನೀಡಿರುತ್ತಾರೆಂದರೆ ಸಾಕ್ಷಿ ಅಲ್ಲಿ ಸುಮಾರು ಕಲ್ಲುಗಳು ಇದ್ದು ಯಾವುದು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸ್ಥಳ ಮಹಜರ್ ನ್ನು ಯಾವಾಗ ಮಾಡಿದರು ಎಂದು ನನಗೆ ನೆನಪಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರವು ನನಗೆ ಈಗ ನೆನಪಿಲ್ಲ. ಘಟನೆ ನಡೆದ ಸ್ಥಳದ ಚಕ್ಕುಬಂದಿ ನೆನಪಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ನಿಮ್ಮ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಊರಿನವರು ಅಪಘಾತವಾದ ವ್ಯಕ್ತಿಗೆ ಚಿಕಿತ್ಸೆ ಕೊಡಿಸಲು ನಿಮಗೆ ತಿಳಿಸಿದ್ದರಿಂದ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. ಆರೋಪಿಯು ನಿಮ್ಮ ತಾಯಿಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಮ್ಮ ಕಾರಿಗೆ ಕಲ್ಲಿನಿಂದ ಹೊಡೇದು ಯಾವುದೇ ಜಖಂ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**